ಕರ್ನಾಟಕ ಸರ್ಕಾರ

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ,ಬೆಂಗಳೂರು-03**

ಸಂಖ್ಯೆ : ಕೆ4/ಪಿಯು/ಹಿಂ.ಮ್ಯೂ.ಪ-01/ಮೌ.ಪ.ಕು/2023-24 ದಿನಾಂಕ : 09.02.2024

**" ಸುತ್ತೋಲೆ "**

ವಿಷಯ : 2024ರ ದ್ವಿತೀಯ ಪಿಯುಸಿ ಪರೀಕ್ಷೆ-01ಕ್ಕೆ ಸಂಬಂಧಿಸಿದಂತೆ, ಹಿಂದೂಸ್ತಾನಿ ಸಂಗೀತ ವಿಷಯದ ಮೌಖಿಕ ಪರೀಕ್ಷೆಗಳಲ್ಲಿ ಅನುಸರಿಸಬೇಕಾದ ಪರೀಕ್ಷಾ ಪದ್ಧತಿ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು.

ಉಲ್ಲೇಖ : ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಪ್ರಕಟಿಸಿರುವ ಹಿಂದೂಸ್ತಾನಿ ಸಂಗೀತ ವಿಷಯದ ಪಠ್ಯ ಪುಸ್ತಕದಲ್ಲಿ ವಿವರಿಸಿರುವ ಪರೀಕ್ಷಾ ಪದ್ಧತಿಯ ಅಂಶಗಳನ್ವಯ.

*****

2024ರ ದ್ವಿತೀಯ ಪಿಯುಸಿ ಪರೀಕ್ಷೆ-01ಕ್ಕೆ ಸಂಬಂಧಿಸಿದಂತೆ, ಹಿಂದೂಸ್ತಾನಿ ಸಂಗೀತ ವಿಷಯದ ಮೌಖಿಕ ಪರೀಕ್ಷೆಗಳ ಕುರಿತು, ಈ ಕೆಳಕಂಡ ಸೂಚನೆಗಳನ್ವಯ ಕಡ್ಡಾಯವಾಗಿ ಕ್ರಮ ಕೈಗೊಳ್ಳಲು ಸೂಚಿಸಿದೆ.

1. 2024ರ ದ್ವಿತೀಯ ಪಿಯುಸಿ ಪರೀಕ್ಷೆ-01ಕ್ಕೆ **ಹಿಂದೂಸ್ತಾನಿ ಸಂಗೀತ** ವಿಷಯದಲ್ಲಿ **ನೊಂದಾಯಿಸಿಕೊಂಡಿರುವ** ಪುನರಾವರ್ತಿತ **(Repeaters)** ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 02 ಮಂದಿ ವಿದ್ಯಾರ್ಥಿಗಳಿದ್ದು, **ಈ 02 ಮಂದಿ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಮಾತ್ರ ಈ ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ನಡೆಸಲಾಗುತ್ತಿದ್ದಂತಹ, ಮಾಖಿಕ ಪರೀಕ್ಷೆಯು ಪ್ರಸ್ತುತ 2024ರ ದ್ವಿತೀಯ ಪಿಯುಸಿ ಪರೀಕ್ಷೆ-01ರಲ್ಲಿ** ಇರುವುದಿಲ್ಲ. ಈ ಪುನರಾವರ್ತಿತ ವಿದ್ಯಾರ್ಥಿಗಳಿಗೆ, **ಹಿಂದಿನ ವರ್ಷಗಳ ಮೌಖಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು**, ಪ್ರಸ್ತುತ 2024ರ ದ್ವಿತೀಯ ಪಿಯುಸಿ ಪರೀಕ್ಷೆ 01ರಲ್ಲಿ **Carry** ಮಾಡಲಾಗುವುದು. (ಮಾನ್ಯ ಅಧ್ಯಕ್ಷರ ಅನುಮೋದನೆ ಮತ್ತು ಆದೇಶದಂತೆ)
2. ಉಲ್ಲೇಖದನ್ವಯ, ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಪ್ರಕಟಿಸಿರುವ ದ್ವಿತೀಯ ಪಿಯುಸಿ ಹಿಂದೂಸ್ತಾನಿ ಸಂಗೀತ ವಿಷಯದ ಪಠ್ಯ ಪುಸ್ತಕದ ಪುಟ ಸಂಖ್ಯೆ 05ರಲ್ಲಿ ವಿವರಿಸಿದ ಪರೀಕ್ಷಾ ವಿಧಾನ ಮತ್ತು ಪರೀಕ್ಷಾ ಅವಧಿಯಂತೆ, 2024ರ ದ್ವಿತೀಯ ಪಿಯುಸಿ ಪರೀಕ್ಷೆ-01ರಲ್ಲಿ **ಹಿಂದೂಸ್ತಾನಿ ಸಂಗೀತ** ವಿಷಯದಲ್ಲಿ **ನೊಂದಾಯಿಸಿಕೊಂಡಿರುವ ರೆಗ್ಯುಲರ್ (Regular)** ವಿದ್ಯಾರ್ಥಿಗಳಿಗೆ ಮಾತ್ರ ಮೌಖಿಕ ಪರೀಕ್ಷೆಗಳನ್ನು ನಡೆಸುವುದು ಕಡ್ಡಾಯವಾಗಿರುತ್ತದೆ.
3. **ಹಿಂದೂಸ್ತಾನಿ ಸಂಗೀತ** ವಿಷಯದ ಮೌಖಿಕ ಪರೀಕ್ಷೆಗಳ **Marks List** ಹಾಗೂ **Nominal Roll** ಗಳನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳ **Login Portal** ನಲ್ಲಿ ಬಿಡಲಾಗಿದೆ. ಆಯಾ ಕಾಲೇಜುಗಳ ಪ್ರಾಂಶುಪಾಲರುಗಳು **Marks List** ಹಾಗೂ **Nominal Roll** ಗಳನ್ನು **Download** ಮಾಡಿಕೊಂಡು, ವಿದ್ಯಾರ್ಥಿಗಳು ಪಡೆದ ಮೌಖಿಕ ಪರೀಕ್ಷೆಗಳ ಅಂಕಗಳನ್ನು **Marks List** ಗಳಲ್ಲಿ ಕಡ್ಡಾಯವಾಗಿ ಭರ್ತಿ ಮಾಡುವುದು.
4. ನಂತರ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳ **Login Portal** ನಲ್ಲಿ **ಹಿಂದೂಸ್ತಾನಿ ಸಂಗೀತ** ವಿಷಯದ ಮೌಖಿಕ ಪರೀಕ್ಷೆಗಳ ಅಂಕಗಳನ್ನು ಭರ್ತಿ ಮಾಡಲು, **Online** ನಲ್ಲಿಯೂ ಸಹ ಅವಕಾಶವನ್ನು ಕಲ್ಪಿಸಲಾಗಿದೆ. ಆದ್ದರಿಂದ ಆಯಾ ಕಾಲೇಜುಗಳ ಪ್ರಾಂಶುಪಾಲರುಗಳು

--2

ಚಾಚೂತಪ್ಪದೇ **ಹಿಂದೂಸ್ತಾನಿ ಸಂಗೀತ** ವಿಷಯದ ಮೌಖಿಕ ಪರೀಕ್ಷೆಗಳ ಅಂಕಗಳನ್ನು **Marks List** ಗಳಲ್ಲಿ ಹಾಗೂ **Online** ನಲ್ಲಿಯೂ ಕಡ್ಡಾಯವಾಗಿ ಭರ್ತಿ ಮಾಡುವುದು.

5. **ಹಿಂದೂಸ್ತಾನಿ ಸಂಗೀತ** ವಿಷಯದ ಮೌಖಿಕ ಪರೀಕ್ಷೆಗಳ ಅಂಕಗಳನ್ನು ಭರ್ತಿ ಮಾಡಿದ **Marks List** ಗಳನ್ನು, ಕಾಲೇಜುಗಳ ಪ್ರಾಂಶುಪಾಲರುಗಳು ಸಹಿ ಮತ್ತು ಮೊಹರು ಮಾಡಿ **ಹಿರಿಯ ಸಹಾಯಕ ನಿರ್ದೇಶಕರು (ಪಿಯು ಪರೀಕ್ಷೆ), 3ನೇ ಮಹಡಿ, K ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003**. ಇಲ್ಲಿಗೆ **ನೊಂದಾಯಿತ ಅಂಚೆ ಮುಖಾಂತರ ಕಳುಹಿಸುವುದು ಪ್ರಾಂಶುಪಾಲರ ಆದ್ಯ ಕರ್ತವ್ಯವಾಗಿರುತ್ತದೆ. ಸೀಲು ಮಾಡಿದ ಅಂಚೆ ಕವರುಗಳ ಮೇಲೆ ಹಿಂದೂಸ್ತಾನಿ ಸಂಗೀತ ಎಂದು ಕಡ್ಡಾಯವಾಗಿ ಬರೆಯುವುದು.**

6. **ಹಿಂದೂಸ್ತಾನಿ ಸಂಗೀತ** ವಿಷಯದ ಮೌಖಿಕ ಪರೀಕ್ಷೆಗಳನ್ನು ದಿನಾಂಕ : **12.02.2024** ರಿಂದ **20.02.2024**ರೊಳಗೆ ನಡೆಸಲು ಈ ಮೂಲಕ ಸೂಚಿಸಿದೆ ಹಾಗೂ ಸದರಿ **ಹಿಂದೂಸ್ತಾನಿ ಸಂಗೀತ** ವಿಷಯದ ಮೌಖಿಕ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗುವಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳ ಆದ್ಯ ಕರ್ತವ್ಯವಾಗಿರುತ್ತದೆ.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ, ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚಿಸಿದೆ. ಪರೀಕ್ಷಾ ಕಾರ್ಯಗಳಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಕಾಲೇಜಿನ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ನಿರ್ದೇಶಕರು(ಪರೀಕ್ಷೆಗಳು)
ಕರ್ನಾಟಕ ಶಾಲಾ ಪರೀಕ್ಷೆ ಮತ್ತು
ಮೌಲ್ಯ ನಿರ್ಣಯ ಮಂಡಲಿ

ಪ್ರತಿಗಳು :

1. ಮಾನ್ಯ ಅಧ್ಯಕ್ಷರು, ಆಪ್ತ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ - ಸೂಕ್ತ ಮಾಹಿತಿಗಾಗಿ.
2. ಮಾನ್ಯ ನಿರ್ದೇಶಕರು, ಆಪ್ತ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ - ಸೂಕ್ತ ಮಾಹಿತಿಗಾಗಿ.
3. ಮಾನ್ಯ ಉಪನಿರ್ದೇಶಕರು ಹಾಗೂ ಮಾನ್ಯ ಸಹಾಯಕ ನಿರ್ದೇಶಕರಿಗೆ (ಪಿಯು ಪರೀಕ್ಷಾ ವಿಭಾಗ), ಕೆ.ಎಸ್.ಇ.ಎ.ಬಿ - ಸೂಕ್ತ ಮಾಹಿತಿಗಾಗಿ.
4. ಸಂಬಂಧಿಸಿದ ಆಯಾ ಜಿಲ್ಲೆಯ ಜಿಲ್ಲಾ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ಮುಂದಿನ ಸೂಕ್ತ ಕ್ರಮಕ್ಕಾಗಿ.
5. ಸಂಬಂಧಿಸಿದ ಆಯಾ ಜಿಲ್ಲೆಯ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮುಂದಿನ ಅಗತ್ಯ ಕ್ರಮಕ್ಕಾಗಿ.
6. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕೆ.ಎಸ್.ಇ.ಎ.ಬಿ- ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಸೂಕ್ತ ಮಾಹಿತಿಗಾಗಿ.
7. ಹೆಚ್ಚುವರಿ/ಕಛೇರಿ ಪ್ರತಿ.